## ಬೆಳದಿಂಗಳ ಸಂಗೀತ 220

**10 ಜನವರಿ 2020**

**ಗಾಯನ**

ಪಂ. ಇಂದೂಧರ ನಿರೋಡಿ

**ಸಹ – ಗಾಯನ**

ಪಂ. ವೀರಭದ್ರಯ್ಯ ಹಿರೇಮಠ್

**ಹಾರ್ಮೋನಿಯಂ**

ಪಂ. ಶ್ರೀರಾಮ್ ಭಟ್

**ತಬಲ**

ಪಂ. ರಮೇಶ್ ಧನ್ನೂರ್

## ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 219

**12 ಡಿಸೆಂಬರ್ 2019 * ಗುರುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



**ಸ್ಯಾಕ್ಸೊಫೋನ್**

ವಿದ್ವಾನ್ ಹರೀಶ್ ಪಾಂಡವ್

**ವಯೊಲಿನ್**

ವಿದ್ವಾನ್ ಸಿ.ಎನ್. ತ್ಯಾಗರಾಜನ್





**ಮೃದಂಗ**

ವಿದ್ವಾನ್ ಆನೂರು ವಿನೋದ್ ಶ್ಯಾಂ

**ವಿದ್ವಾನ್ ಹರೀಶ್ ಪಾಂಡವ್** ಸಂಗೀತದ ಕೌಟುಂಬಿಕ ಹಿನ್ನೆಲೆಯಲ್ಲಿ ಅರಳಿದ ಕಲಾವಿದರು. ಪ್ರಾರಂಭದಲ್ಲಿ ಚಿಕ್ಕಪ್ಪ ವಿದ್ವಾನ್ ಎನ್. ಜಯರಾಂ ಮತ್ತು ವಿದ್ವಾನ್ ಎಚ್.ಎ. ನಿಂಗರಾಜ್ ಪಾಂಡವ್‌ರವರ ಬಳಿ ಸ್ಯಾಕ್ಸೊಫೋನ್ ವಾದನವನ್ನು ಕಲಿತರು. ಪ್ರಸ್ತುತ ಮೈಸೂರಿನ ವಿದುಷಿ ಗಾಯತ್ರಿ ಸತ್ಯನಾರಾಯಣ್ ಅವರ ಬಳಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇವರು ಸ್ಯಾಕ್ಸೋಫೋನ್ ಕಲಾವಿದರಾಗಿರುವುದರ ಜೊತೆಗೆ ಗಾಯಕರೂ ಆಗಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಿಂದ ಎಂ.ಎ. (ಅರ್ಥಶಾಸ್ತ್ರ) ಪದವಿಯನ್ನು, ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯದಿಂದ ಎಂ.ಎ. (ಕರ್ನಾಟಕ ಸಂಗೀತ) ಪದವಿಯನ್ನು ಸ್ವರ್ಣಪದಕದೊಂದಿಗೆ ಗಳಿಸಿದ್ದಾರೆ. ರಾಜ್ಯ ಸರ್ಕಾರವು ನಡೆಸುವ ವಿದ್ವತ್ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಹಲವಾರು ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಗಳಿಸಿದ್ದಾರೆ. ಮೈಸೂರು ದಸರಾ ಸಮಿತಿಯ 'ಕಲಾಸೌರಭ' ಪುರಸ್ಕಾರ, ಮಂಡ್ಯ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಮತ್ತು ಸುಶಮೀಂದ್ರ ಕಲಾ ಪುರಸ್ಕಾರ್ ಮುಂತಾದ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

**ವಿದ್ವಾನ್ ಸಿ.ಎನ್. ತ್ಯಾಗರಾಜನ್**‌ರವರು ಸಿಂಗಪೂರ್ ಇಂಡಿಯನ್ ಫೈನ್ ಆರ್ಟ್ಸ್ ಸೊಸೈಟಿಯ ಶಾಲೆಯಲ್ಲಿ ವಯೊಲಿನ್ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ಟಿ. ಚೌಡಯ್ಯ ಪರಂಪರೆಗೆ ಸೇರಿದವರು. ಕೇಂದ್ರ ಸರ್ಕಾರದ ವಿದ್ಯಾರ್ಥಿವೇತನ ಪಡೆದಿರುವ ಅಪೂರ್ವ ಪ್ರತಿಭಾವಂತರು.

**ವಿದ್ವಾನ್ ಆನೂರು ವಿನೋದ್ ಶ್ಯಾಂ**ರವರು ತಂದೆ ಖ್ಯಾತ ಕಲಾವಿದರಾದ ಗಾನಕಲಾಶ್ರೀ ಆನೂರು ಆರ್. ಅನಂತಕೃಷ್ಣಶರ್ಮರ ಬಳಿ ಶಿಷ್ಯವೃತ್ತಿ ಮಾಡುತ್ತಿದ್ದಾರೆ. ಹಲವಾರು ಲಯವಾದ್ಯಗಳಲ್ಲಿ ಪ್ರಭುತ್ವ ಪಡೆದಿದ್ದಾರೆ. ಕಳೆದ 15 ವರ್ಷಗಳಿಂದ ಹಲವಾರು ಸಂಗೀತ ದಿಗ್ಗಜರಿಗೆ ಸಾಥ್ ನೀಡಿದ್ದಾರೆ. ಅನನ್ಯ ನಾದಜ್ಯೋತಿ ಕಲಾ ಪುರಸ್ಕಾರ, ಸ್ವರ ಸುನಾದ ಟ್ರಸ್ಟ್ ಪ್ರಶಸ್ತಿ, ಅಖಿಲ ಭಾರತ ಆಕಾಶವಾಣಿ ಸ್ಪರ್ಧೆ ಪ್ರಶಸ್ತಿ ಮೊದಲಾದ ಪುರಸ್ಕಾರಗಳನ್ನು ಪಡೆದಿದ್ದಾರೆ. ಸಿಂಗಪೂರ್, ಅಬು ಧಾಬಿ ಮತ್ತು ಜರ್ಮನಿ ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ. 'ಲಯಲಾವಣ್ಯ' ತಂಡದ ಸದಸ್ಯರಲ್ಲೊಬ್ಬರು.

**ಫೋನ್: 0821–2548220, 2548221 * ಫ್ಯಾಕ್ಸ್: 0821–2548219 * ಇಮೇಲ್: jssashram@yahoo.com**